**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**ಸಿ.ಸಿ.ನಂ.51/2015**

**ದಿನಾಂಕಃ 09.01.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿಯ ಹೆಸರು | ಃ | ಕೃಷ್ಣಮೂರ್ತಿ | ಚಾಸಾ-5, ಪ್ರಾಸ.-4 |
| ತಂದೆಯ ಹೆಸರು | ಃ | ಮಲ್ಲಪ್ಪ | |
| ವಯಸ್ಸು | ಃ | 59 ವರ್ಷ | |
| ಉದ್ಯೋಗ | ಃ | ವ್ಯವಸಾಯ | |
| ವಾಸ | ಃ | ಚಿಕ್ಕಬಾಸೂರು | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಆರೋಪಿತರು ಗೊತ್ತು. ಹಲವಾರು ವರ್ಷಗಳ ಹಿಂದೆ ಪೋಲಿಸರು ಠಾಣೆಯಲ್ಲಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸಾಕ್ಷಿಯು ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಎಂದು, ಸಾಕ್ಷಿ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಎರಡು ಛಾಯಾಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-9 ಮತ್ತು 10 ಎಂದು ಗುರುತಿಸಲಾಯಿತು. ಯಾವ ದಾಖಲೆಗಳನ್ನು ವಶಪಡಿಸಿಕೊಂಡರು ಎಂದು ನನಗೆ ಅರ್ಥವಾಗುವುದಿಲ್ಲ. ನನ್ನ ನಂತರ ಚಾಸಾ-6 ಸಹಿ ಮಾಡಿರುತ್ತಾರೆ. ಸಾಕ್ಷಿಯು ನಿಪಿ-6ರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು. ನಿಪಿ-6ಕ್ಕೆ ಎಲ್ಲಿ ಸಹಿ ಮಾಡಿದ್ದೇನೆ ಎಂದು ನೆನಪಿರುವುದಿಲ್ಲ. ಅಂದಾಜು 8 ವರ್ಷಗಳ ಹಿಂದೆ ಸಹಿ ಮಾಡಿರುತ್ತೇನೆ. ನನ್ನ ನಂತರ ಯಾರು ಸಹಿ ಮಾಡಿದರು ಎಂದು ತಿಳಿದಿರುವುದಿಲ್ಲ. ಪೋಲಿಸರು ಏನು ಅಮಾನತ್ತುಪಡಿಸಿಕೊಂಡಿದ್ದಾರೆ ಎಂದು ತಿಳಿದಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ**

ದಿಃ07.12.2012 ರಂದು ನನ್ನ ಮತ್ತು ಚಾಸಾ-6 ರವರಿಗೆ ಪೋಲಿಸರು ನೋಟಿಸು

ನೀಡಿ ಮೆಸ್ಕಾಂ ಕಛೇರಿಗೆ ಹಾಜರಾಗಲು ತಿಳಿಸಿದ್ದರು ಎಂದರೆ ಸರಿ. ಆದಿನ ನಾಗರಾಜು ರವರು ನಿಪಿ-2 ಮತ್ತು 3 ರ ದಾಖಲೆಯನ್ನು ಹಾಜರುಪಡಿಸಿದರು ಎಂದರೆ ಸಾಕ್ಷಿಯು ಮಲ್ಲಪ್ಪ ರವರು ನೀಡಿರಬಹುದು ಎಂದು ನುಡಿಯುತ್ತಾರೆ. ಸದರಿ ಮಹಜರನ್ನು 1.00 ರಿಂದ 3.00 ಗಂಟೆವರೆಗೆ ಜರುಗಿಸಿರುತ್ತಾರೆ ಎಂದರೆ ಸರಿ. ಅದೇ ರೀತಿ ದಿಃ 23.10.2013 ರಂದು ನನ್ನ ಮತ್ತು ಚಾಸಾ-12 ರವರಿಗೆ ನೋಟಿಸು ನೀಡಿ ಮಹಜರ್ ಗೆ ಹಾಜರಾಗುವಂತೆ ತಿಳಿಸಿದ್ದರು ಎಂದರೆ ಸರಿ. ಆ ದಿನ ನಿಪಿ-7 ರ ವಿನಿಮಯ ಪತ್ರವನ್ನು ಚಾಸಾ-4 ರವರು ಹಾಜರುಪಡಿಸಿದರು ಎಂದರೆ ಸರಿ. ಸದರಿ ಮಹಜರನ್ನು ಬೆಳಗ್ಗೆ 10.00 ರಿಂದ 10.45 ರವರೆಗೆ ಮಾಡಲಾಯಿತು ಎಂದರೆ ಸರಿ.

<u>ಪಾಟೀಸವಾಲುಃ ಶ್ರೀ ಬಿ ಆರ್ ಆರೋಪಿ ಪರ ವಕೀಲರಿಂದಃ</u>

ಈ ಪ್ರಕರಣದಲ್ಲಿ 10 ವರ್ಷದ ಹಿಂದೆ ಪೋಲಿಸರು ಒಂದು ನೋಟಿಸು ನೀಡಿದ್ದರು. ಯಾವ ವಿಷಯಕ್ಕೆ ನೋಟಿಸು ನೀಡಿದ್ದರು ಎಂದು ತಿಳಿದಿರುವುದಿಲ್ಲ. ಸಾಕ್ಷಿ ಮುಂದುವರೆದು ನೋಟಿಸು ನೀಡಿರಲಿಲ್ಲ ಆದರೆ ಪೋಲಿಸರು ಬಂದು ಹೇಳಿದ್ದರು ಎಂದು ನುಡಿಯುತ್ತಾರೆ. ಠಾಣೆಗೆ ನಾನು ಮತ್ತು ಚಾಸಾ-6 ಹೋಗಿದ್ದೆವು. ನಾವು ಒಮ್ಮೆ ಮಾತ್ರ ಮಹಜರ್ ಗೆ ಹೋಗಿದ್ದೆವು. ನನ್ನೊಂದಿಗೆ ಬಂದ ಇತರೇ ಜನರು ಯಾರು ಎಂದು ತಿಳಿದಿರುವುದಿಲ್ಲ. ನಾನು ಒಮ್ಮೆ ಠಾಣೆಗೆ ಮತ್ತು ಒಮ್ಮೆ ಮೆಸ್ಕಾಂ ಕಛೇರಿಗೆ ಹೋಗಿರುತ್ತೇನೆ, ದಿನಾಂಕ ನೆನಪಿರುವುದಿಲ್ಲ. ನಾನು ಠಾಣೆಗೆ ಹೋದಾಗ ಚಾಸಾ-1 ರವರು ಇದ್ದರು. ನಾನು ಒಂದೇ ಸಹಿ ಮಾಡಿರುತ್ತೇನೆ. ನಿಪಿ-2 ಮತ್ತು 3 ನ್ನು ಚಾಸಾ-1 ರವರು ನೀಡಿರುತ್ತಾರೆ. ಚಾಸಾ-4 ರವರು ನಿಪಿ-2 ಮತ್ತು 3 ನ್ನು ಮೆಸ್ಕಾಂ ಕಛೇರಿಗೆ ಹಾಜರುಪಡಿಸಿರುತ್ತಾರೆ. ನಿಪಿ-7 ಯಾರು ಯಾರಿಗೆ ಯಾವಾಗ ನೀಡಿದರು ಎಂದು ತಿಳಿದಿರುವುದಿಲ್ಲ. ನಿಪಿ-6 ಮತ್ತು 8 ರಲ್ಲಿ ಏನು ಬರೆದಿತ್ತು ಎಂದು ತಿಳಿದಿರುವುದಿಲ್ಲ. ಮಲ್ಲಪ್ಪ ರವರು ಜಮೀನಿನ ವಿಷಯದಲ್ಲಿ ಗಲಾಟೆ ಮಾಡಿಕೊಂಡಿದ್ದರು ಹಾಗಾಗಿ ನನಗೆ ಸದರಿ ದಾಖಲೆಗಳಿಗೆ ಸಹಿ ಮಾಡಲು ತಿಳಿಸದರು, ಆದ್ದರಿಂದ ಸಹಿ ಮಾಡಿರುತ್ತೇನೆ.

ಮೆಸ್ಕಾಂ ಕಛೇರಿಗೆ ನನ್ನನ್ನು ಚಾಸಾ-4 ಕರೆದುಕೊಂಡು ಹೋಗಿರುತ್ತಾರೆ. ನಿಪಿ-6 ಮತ್ತು 8 ರಲ್ಲಿ ಏನು ಬರೆದಿದೆ ಎಂದು ತಿಳಿದಿರುವುದಿಲ್ಲ. ಚಾಸಾ-4 ಮತ್ತು ನಾನು ಅನೂನ್ಯವಾಗಿದ್ದೇವೆ ಎಂದರೆ ಸರಿ. ಚಾಸಾ-2, 4 ಮತ್ತು 1 ನೇ ಆರೋಪಿ ನಡುವೆ

ಜಮೀನಿನ ಸಂಬಂಧವಾಗಿ ವಿವಾದ ಇರುತ್ತದೆ. ನಾನು ಠಾಣೆಗೆ ಮತ್ತು ಮೆಸ್ಕಾಂ ಕಛೇರಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ನನ್ನ ಮುಂದೆ ಯಾವುದೇ ಮಹಜರ್ ಮಾಡಿಲ್ಲ ಮತ್ತು ಯಾವುದೇ ದಾಖಲೆಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ-9 ಮತ್ತು 10 ಯಾವ ಕಾರಣಕ್ಕಾಗಿ ತೆಗೆಯಲಾಯಿತು ಎಂದು ಗೊತ್ತಿಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಒ

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.